ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 1069/2021

ಸಿ ಡಬ್ಲ್ಯೂ- 1

ಪಿ ಡಬ್ಲ್ಯೂ- 1

ದಿಃ 08-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಮಹೇಶ್ ಬಾಬು ನಾಯಕ

ತಂದೆಯ ಹೆಸರುಃ ಬಾಬು ನಾಯಕ

ವಯಸ್ಸುಃ 56 ವರ್ಷ

ಉದ್ಯೋಗಃ ರೈತಾಬಿ ಮತ್ತು ವ್ಯವಹಾರ

ವಿಳಾಸಃ ಅವರ್ಸಾ

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ನನಗೆ ಚಾಸಾ-3 ರವರ ಪರಿಚಯ ಇರುತ್ತದೆ. ಚಾಸಾ-2 ರವರ ಪರಿಚಯ ಇರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ನಾನು ಅವರ್ಸಾದಿಂದ ಕಾರವಾರ ಕಡೆಗೆ ಹೋಗುತ್ತಿದ್ದಾಗ ಹಾರವಾಡ ಕ್ರಾಸ್ ಹತ್ತಿರ ಅಪಘಾತವಾಗಿದ್ದು ಪೊಲೀಸರು ಆ ಸ್ಥಳದಲ್ಲಿ ನಿಂತಿದ್ದರು. ಬೈಕ್ ಮತ್ತು ಟಿಪರ್ ನಡುವೆ ಅಪಘಾತವಾಗಿದ್ದು, ಸದರಿ ಅಪಘಾತದಲ್ಲಿ ಒಬ್ಬರು ಮರಣ ಹೊಂದಿರುತ್ತಾರೆ ಅವರ ಹೆಸರು ಗೊತ್ತಿರುವುದಿಲ್ಲ. ಬೈಕ್ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನಗೆ ದೂರನ್ನು ನೀಡಲು ಹೇಳಿದರು. ನಾನು ಅದೇ ದಿನ ದೂರನ್ನು ನೀಡಿರುತ್ತೇನೆ. ದೂರನ್ನು ಸಾಕ್ಷಿಗೆ ತೋರಿಸಿದ್ದು. ಅದರ ಮೇಲಿರುವ ಸಹಿಯನ್ನು ಗುರುತಿಸುತ್ತಾರೆ. ದೂರನ್ನು ನಿಶಾನೆ ಪಿ1 ಮತ್ತು ಸಹಿಯನ್ನು ನಿಶಾನೆ ಪಿ1 ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿ 1 ಸಹಿಯನ್ನು ಹಾಕಿರುತ್ತೇನೆ. ಪೊಲೀಸ್ ಠಾಣೆಯಲ್ಲಿ 1-2 ಸಹಿಗಳನ್ನು ಹಾಕಿರುತ್ತೇನೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು ಅದರ ಮೇಲಿರುವ ಸಹಿಯನ್ನು ಗುರುತಿಸುತ್ತಾರೆ. ಪಂಚನಾಮೆಯನ್ನು ನಿಶಾನೆ ಪಿ2 ಮತ್ತು ಸಹಿಯನ್ನು ಪಿ2 ಎ ಎಂದು ಗುರುತಿಸಲಾಯಿತು. ನಕಾಶೆಯನ್ನು ತೋರಿಸಿದ್ದು ಅದರ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸುತ್ತಾರೆ. ನಕಾಶೆಯನ್ನು ನಿಶಾನೆ ಪಿ3 ಮತ್ತು ಸಹಿಯನ್ನು ನಿಶಾನೆ ಪಿ3 ಎ ಎಂದು

ಗುರುತಿಸಲಾಯಿತು. ನಂತರ ಪೋಟೊಗಳನ್ನು ತೆಗೆದಿರುತ್ತಾರೆ. ಪೋಟೊಗಳನ್ನು ಸಾಕ್ಷಿಗೆ ತೋಸಿದ್ದು, ಅದರಲ್ಲಿ ತಮ್ಮನ್ನು ಗುರುತಿಸಿದ್ದುದ ಸದರಿ ಪೋಟೊಗಳನ್ನು ಪುರಾವೆಗೆ ಒಳಪಟ್ಟು ನಿಶಾನೆ 4 ಮತ್ತು 5 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ನಿಂತಿರುವ ಆರೋಪಿಯು ಪರಿಚಯ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಟಣೆಸಿದ್ದು, ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿಸಲಾಯಿತು.)

ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ

ದಿ 30-07-2021 ರಂದು ನನ್ನ ಮುಂದೆ ಸಂಜೆ ಸುಮಾರು 06.35 ಘಂಟೆಗೆ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಬೈಕ್ ಮೇಲೆ ಇದ್ದ ಇಬ್ಬರು ವ್ಯಕ್ತಿಗಳು ಕೆಳಗಡೆ ರಸೆಯ ಬದಿಗೆ ಬಿದಿದ್ದರು ಅದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಹಿಂದೆ ಕುಳಿತುಕೊಂಡಿದ ಚಾಸಾ-6 ರವರಿಗೆ ಗಾಯವಾಗಿತ್ತು ಎಂದರೆ ಸರಿ. ನಾನು ಬೈಕ್ ಸಂಖ್ಯೆ ಕೆಎ-31-ಡಬ್ಲೂ-9212 ನೋಡಿರುತ್ತೇನೆ ಎಂದರೆ ಸರಿಯಲ್ಲ. ಹಾಗೆ ಅಪಘಾತ ಪಡಿಸಿದ ಟಿಪ್ಪರ್ ವಾಹನ ಸಂಖ್ಯೆ ಎಆರ್-02-2941 ನೋಡಿರುತ್ತೇನೆ ಎಂದರೆ ಸರಿಯಲ್ಲ. ಅದರ ಚಾಲಕನನ್ನು ಸಹ ನೋಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚಾಲಕನು ನ್ಯಾಯಾಲಯದ ಮುಂದೆ ಇರುತ್ತಾನೆ ಎಂದರೆ ಸರಿಯಲ್ಲ. ಈ ಪ್ರಕರಣಂ ಸಂಪೂರ್ಣ ವಿಷಯ ನನಗೆ ಗೊತ್ತಿದ್ದು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಸೀಗ್ನಲ್ ಅಥವಾ ಕೈಸನ್ನೆ ಮಾಡದೆ ಯು ಟರ್ನ್ ತೆಗೆದುಕೊಂಡಿರುತ್ತಾರೆ ಆದ್ದುದರಿಂದ ಅಪಘಾತವಾಯಿತು ಎಂದರೆ ಸರಿಯಲ್ಲ. ದಿ 31-07-2021ರಂದು ನಾನೇ ಪಂಚನಾಮೆಯ ಜಾಗವನ್ನು ತೋರಿಸಿರುತ್ತೇನೆ ಎಂದರೆ ಸರಿ. ನನಗೆ ಈ ಪ್ರಕರಣದ ಮಾಹಿತಿ ಇದ್ದು ಪಂಚನಾಮೆಗೆ ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಅಪಘಾತ ಸ್ಥಳದ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳಗಳಲ್ಲಿ ಪೋಟೊಗಳನ್ನು ಸಹ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದರು ಸಹ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತ ಪರ ವಕೀಲರಾದ ಶ್ರೀ ವಿ.ವಿ.ಎಸ್. ರವರಿಂದ

ನಾನು ಸಹಿ ಮಾಡಿರುವ ದಾಖಲೆಗಳಲ್ಲಿ ಏನು ಬರೆದಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುತ್ತೇನೆ ಎಂದರೆ ಸರಿ. ಪೊಲೀಸರಿಗೆ ನನ್ನ ಪರಿಚಯ ಇರುತ್ತದೆ ಎಂದರೆ ಸರಿ. ಪೊಲೀಸರು ಕೆಲವೊಂದು ಸಲ ಸಹಿಯನ್ನು ಮಾಡಿ ಎಂದು ಹೇಳಿದರೆ ಮಾಡಬೇಕಾಗುತ್ತದೆ ಎಂದರೆ ಸರಿ. ಮೃತರಿಗೆ ಹಾಗೂ ಗಾಯಾಳುಗಳಿಗೆ ಪರಿಹಾರ ಸಿಗಬೇಕು ಎಂಬ ಮನಸ್ಸಿದೆ ಎಂದರೆ ಸರಿ. ಬೈಕ್ ಓಡಿಸುವವರು ರಾತ್ರಿ ತುರ್ತಗಿ ಬೆಂಗಳೂರಿನ ಕಡೆಗೆ ಹೋಗಬೇಕು ಎಂದಿದ್ದು ಕೇಳಿದ್ದೇನೆ ಎಂದರೆ ಸರಿ. ಫೋಟೊಗಳನುನ ಯಾವ ಕಾರಣಕ್ಕಾಗಿ ತೆಗೆದುಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿ. ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.